ಸೃಜನಿ

SRUJANI: Indian Journal of Innovative Research and Development (SIJIRD)
Volume-5 Issue 1, March-April 2026, Pp. 53-62
Bi-Monthly, Peer-Reviewed, Open Access, Indexed Journal

I S S N: 2583-3510
SIRDF
JOURNALS
editor@srujani.in
www.srujani.in

# ಚಿತ್ರದುರ್ಗ ಪಾಳೆಯಗಾರರ ಕಾಲದ ಭೂ ಮಾಲೀಕತ್ವ ಹಾಗೂ ಕೃಷಿ ಭೂಮಿಯ ವರ್ಗೀಕರಣ

**ಡಾ. ಶಶಿಕಾಂತ್**
ಸಹ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕುರುಗೋಡು, ಬಳ್ಳಾರಿ

***Abstract:***
*'ಚಿತ್ರದುರ್ಗ ಪಾಳೆಯಗಾರರ ಕಾಲದ ಭೂ ಮಾಲೀಕತ್ವ ಹಾಗೂ ಕೃಷಿ ಭೂಮಿಯ ವರ್ಗೀಕರಣ' ಎಂಬ ಸಂಶೋಧನಾ ಲೇಖನವು ಪಾಳೆಯಗಾರರ ಆಡಳಿತಾವಧಿಯಲ್ಲಿ ಭೂಮಿಯ ಮಾಲೀಕತ್ವ, ನಿಯಂತ್ರಣ ಮತ್ತು ಕೃಷಿ ವ್ಯವಸ್ಥೆಯ ಸ್ವರೂಪವನ್ನು ವಿಶ್ಲೇಷಿಸುತ್ತದೆ. ಚಿತ್ರದುರ್ಗ ಪ್ರದೇಶದ ಭೂಸಂಬಂಧಗಳು, ಜಮೀನ್ದಾರಿ ಸ್ವರೂಪದ ಹಕ್ಕುಗಳು, ರೈತರ ಸ್ಥಾನಮಾನ ಹಾಗೂ ಕೃಷಿ ಉತ್ಪಾದನೆಯೊಂದಿಗೆ ಭೂಮಿಯ ಮಾಲೀಕತ್ವ ಹೊಂದಿದ್ದ ಸಂಬಂಧವನ್ನು ಹಾಗೂ ಕೃಷಿ ಭೂಮಿಯ ವರ್ಗೀಕರಣ, ಭೂಮಿಯ ಬಳಕೆ, ನೀರಾವರಿ ಸೌಲಭ್ಯಗಳು ಮತ್ತು ಭೂಮಿಯ ಫಲವತ್ತತೆಯ ಆಧಾರದ ಮೇಲೆ ರೂಪುಗೊಂಡಿದ್ದ ವ್ಯತ್ಯಾಸಗಳನ್ನು ಅಧ್ಯಯನ ಮಾಡಲಾಗಿದೆ. ಪಾಳೆಯಗಾರರ ಆಡಳಿತದಲ್ಲಿ ತೆರಿಗೆ ಸಂಗ್ರಹಣೆ, ಭೂ ಕಂದಾಯ ವ್ಯವಸ್ಥೆ, ಐತಿಹಾಸಿಕ ದಾಖಲೆಗಳು, ಶಾಸನಗಳು ಮತ್ತು ಲಭ್ಯವಿರುವ ಸಾಹಿತ್ಯಾಧಾರಗಳ ನೆರವಿನಿಂದ ಚಿತ್ರದುರ್ಗದ ಕೃಷಿ ಭೂ ವ್ಯವಸ್ಥೆಯನ್ನು ಕುರಿತು ಈ ಅಧ್ಯಯನದಲ್ಲಿ ಚರ್ಚಿಸಲಾಗಿದೆ ಹಾಗೂ ಭೂ ಮಾಲೀಕತ್ವದ ಜೊತೆಗೆ ರಾಜರು ತಮ್ಮ ಆಡಳಿತದ ಅನುಕೂಲಕ್ಕಾಗಿ ತಮ್ಮ ವ್ಯಾಪ್ತಿಯ ಭೂಮಿಯನ್ನು ವಿಭಾಗಿಸಿದ ಬಗೆಯ ಕುರಿತು ಅಧ್ಯಯನ ನಡೆಸಲಾಗಿದೆ.*

***Keywords:*** *ಭೂ ಮಾಲೀಕತ್ವ, ಕೃಷಿ ಭೂಮಿ, ಪಾಳೆಯಗಾರರ ಆಡಳಿತ, ಭೂ ಕಂದಾಯ ವ್ಯವಸ್ಥೆ, ಚಿತ್ರದುರ್ಗದ ಇತಿಹಾಸ.*

## ಪೀಠಿಕೆ

ನಾಯಕರ ಕಾಲದಲ್ಲಿ ಭೂ ಆಧಾರಿತ ಅರ್ಥವ್ಯವಸ್ಥೆ ಜಾರಿಯಲ್ಲಿತ್ತು ಎನ್ನುವುದು ತಿಳಿದುಬರುತ್ತದೆ. ಇದು ಸಾಮಾಜಿಕ ಮತ್ತು ಆರ್ಥಿಕ ಪರಿವರ್ತನೆಯನ್ನು ಸೂಚಿಸುತ್ತದೆ. ಬುಡಕಟ್ಟು ಸಮಾಜ ಕೃಷಿ ವ್ಯವಸ್ಥೆ ಹಲವಾರು ಬದಲಾವಣೆಗಳಿಗೆ ಒಳಪಟ್ಟಿತ್ತು. ಇದು ರಾಜ್ಯವ್ಯವಸ್ಥೆಯ ಮೇಲೆ ಮಹತ್ತರ ಪರಿಣಾಮಗಳನ್ನು ಬೀರಿತು. ನಾಯಕರು ಒಂದು ರೀತಿಯ ಭೂ ಹಿಡುವಳಿದಾರರಾಗಿ ತಮ್ಮ ಅಧಿಕಾರ ರಚನೆಯನ್ನು ಮಾಡಿಕೊಂಡರು. ವಿಜಯನಗರದ ನಂತರ ಸ್ವತಂತ್ರರು ಆದ ಮೇಲೆ ಖಾಸಗಿಯವರಿಗೆ ಭೂ ದಾನಗಳನ್ನು ಮಾಡಲು ಆರಂಭಿಸಿದರು. ಸ್ವಂತ ಭೂಮಿಯನ್ನು ಹೊಂದುವ ಪ್ರಕ್ರಿಯೆಗಳು ಕಾಣಿಸಿಕೊಳ್ಳಲಾರಂಭಿಸಿದವು. ಭೂಮಿಯನ್ನು ಹೊಂದುವುದು ಸಮಾಜದಲ್ಲಿ ಗೌರವದ ಪ್ರಶ್ನೆಯೂ ಆಗಿತ್ತು.[1] ಪ್ರತಿಯೊಬ್ಬ ವ್ಯಕ್ತಿಯೂ ತನ್ನದೇ ಆದ ಸ್ವಂತ ಭೂಮಿಯನ್ನು ಹೊಂದಲು ಆಸೆಪಡುತ್ತಿದ್ದುದು ಅಂದಿನ ಸಹಜ ಬೆಳವಣಿಗೆಯಾಗಿತ್ತು. ಅಂದಿನ ಸಂದರ್ಭದಲ್ಲಿ

***Please cite this article as:*** ಶಶಿಕಾಂತ್. (2026). ಚಿತ್ರದುರ್ಗ ಪಾಳೆಯಗಾರರ ಕಾಲದ ಭೂ ಮಾಲೀಕತ್ವ ಹಾಗೂ ಕೃಷಿ ಭೂಮಿಯ ವರ್ಗೀಕರಣ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 5(1), 53–62

ಯಾವ ರೀತಿಯ ಭೂಮಾಲೀಕತ್ವ ಅಸ್ತಿತ್ವದಲ್ಲಿತ್ತು. ಎನ್ನುವುದನ್ನು ಅರ್ಥೈಸಿಕೊಳ್ಳುವುದು ಕಷ್ಟದ ವಿಚಾರವೇ ಆಗಿದೆ. ಆದರೂ ಲಭ್ಯವಿರುವ ಶಾಸನಗಳು ಮತ್ತು ಸಾಹಿತ್ಯ ಕೃತಿಗಳು ಹಾಗೂ ಆಧುನಿಕ ಬರವಣಿಗೆಗಳ ಸಹಾಯದಿಂದ ಕೆಲವೊಂದು ತೀರ್ಮಾನಗಳನ್ನು ತೆಗೆದುಕೊಳ್ಳಬಹುದಾಗಿದೆ. ಭೂಮಿಯ ಒಡೆತನ ಏಕರೂಪದ್ದಾಗಿರಲಿಲ್ಲ. ಹಲವಾರು ಮಾದರಿಯ ಭೂ ಮಾಲೀಕತ್ವಗಳು ಕಂಡುಬರುತ್ತವೆ. ಓರಿಯಂಟಾಲಿಸ್ಟ್, ರಾಷ್ಟ್ರೀಯವಾದಿ, ಮಾರ್ಕ್ಸ್‌ವಾದಿ, ಸಬಾಲ್ಟರ್ನ್ ಮುಂತಾದ ಪಂಥಗಳು ನಾನಾ ಮಾದರಿಯ ಭೂ ಮಾಲೀಕತ್ವದ ಕುರಿತಾಗಿ ಚರ್ಚೆ ನಡೆಸಿವೆ. ಈ ಎಲ್ಲ ಚರ್ಚೆಗಳಲ್ಲಿ ಕಂಡುಬರುವ ಭೂಮಾಲೀಕತ್ವದ ಪ್ರಮುಖ ಮಾದರಿಗಳೆಂದರೆ, ರಾಜನಿಗೆ ಸೇರಿದ ಭೂಮಿ, ಖಾಸಗಿ ಭೂಮಿ, ಸಾಮುದಾಯಕ ಅಥವಾ ಜಂಟಿ ಒಡೆತನದ ಭೂಮಿ ಹಾಗೂ ದಾನದ ರೂಪದಲ್ಲಿ ಪಡೆದ ಭೂಮಿ. ಇವುಗಳ ಅಧ್ಯಯನವು ಭೂಮಿಯ ಒಡೆತನ ಯಾರ ಅಧೀನದಲ್ಲಿತ್ತು ಹಾಗೂ ಅದರ ಸ್ವರೂಪವೇನು ಎನ್ನುವ ಪ್ರಶ್ನೆಗೆ ಉತ್ತರಿಸುತ್ತದೆ.

ರಾಜ್ಯದ ಭೂಮಿಯ ಸಂಪೂರ್ಣ ಒಡೆತನ ಅರಸನಿಗೆ ಸೇರಿತ್ತು ಎನ್ನುವ ವಾದವಿದ್ದರೂ ಅದನ್ನು ಒಪ್ಪಲು ಸಾಧ್ಯವಾಗುವುದಿಲ್ಲ. ರಾಜ ಸರ್ವೋಚ್ಚ ಭೂಮಾಲೀಕನಾಗಲು ಸಾಧ್ಯವೇ ಇಲ್ಲ. ರಾಜ್ಯದ ಭೂ ಸಂಪತ್ತಿನಲ್ಲಿ ಒಂದು ಭಾಗವು ರಾಜ್ಯ ಭೂಮಿಯನ್ನೂ, ರಾಜನ ವೈಯಕ್ತಿಕ ಆಸ್ತಿಪಾಸ್ತಿಗಳನ್ನು ಒಳಗೊಂಡಿರುತ್ತಿತ್ತು. ರಾಜನ ಭೂಮಿಯನ್ನು ವಿಶೇಷ ಅಧಿಕಾರಿಗಳು ನೋಡಿಕೊಳ್ಳುತ್ತಿದ್ದರು. ಭೂಮಿಯ ಎಲ್ಲ ಕೆಲಸಗಳನ್ನು ಕೂಲಿಯಾಳುಗಳು, ಗೇಣಿ ರೈತರು ಮಾಡುತ್ತಿದ್ದರು. ವಸಾಹತುಶಾಹಿ ಚರಿತ್ರೆಕಾರ ವಿನ್ಸೆಂಟ್ ಸ್ಮಿತ್ ಅವರ ಪ್ರಕಾರ ಭೂಮಿಯ ಸಂಪೂರ್ಣ ಒಡೆತನ ರಾಜ್ಯದ್ದಾಗಿತ್ತು.[2] ರಾಜ್ಯದ ಒಡೆತನವನ್ನು ಹೇಳುವ ಇಂಥ ಅನೇಕ ಉಲ್ಲೇಖಗಳು ಸಿಗುತ್ತವೆ. ಆದರೆ ಈ ಹೇಳಿಕೆಗಳು ವಾಸ್ತವ ಸ್ಥಿತಿಗೆ ದೂರವಾಗಿದ್ದು ಚರಿತ್ರೆಯನ್ನು ತಪ್ಪಾಗಿ ಅರ್ಥೈಸಿಕೊಂಡಿದ್ದರ ಪರಿಣಾಮಗಳಾಗಿವೆ. ರಾಜ್ಯದ ಎಲ್ಲ ಸಂಪತ್ತು ಮೇಲ್ನೋಟಕ್ಕೆ ರಾಜನ ಅಧೀನದಲ್ಲಿದ್ದಂತೆ ಕಂಡುಬರುವುದು ಸಹಜ. ಆದರೆ ಅದು ವಾಸ್ತವ ಸ್ಥಿತಿಯಲ್ಲ. ಏಕೆಂದರೆ ಅನೇಕ ಖಾಸಗಿ ವ್ಯಕ್ತಿಗಳು ಹಾಗೂ ಸಾಮಂತ ಅರಸರು ಸ್ವಂತ ಆಸ್ತಿಯನ್ನು ಹೊಂದಿರುತ್ತಿದ್ದರು. ಅವರು ಅರಸನಿಗೆ ಗೌರವದ ಸಂಕೇತವಾಗಿ ಕಪ್ಪ ಕಾಣಿಕೆಗಳನ್ನು ಸಲ್ಲಿಸುತ್ತಿದ್ದರು. ಇದೇ ಮಾದರಿಯಲ್ಲಿ ಪಾಳೆಯಗಾರರು ಕಂಡುಬಂದದ್ದು. ಅರಸರು ತಮ್ಮ ಅಧೀನಕ್ಕೆ ಒಳಪಡದ ಭೂಮಿಯನ್ನು ದಾನ ಕೊಡಬೇಕಾಗಿ ಬಂದರೆ ಸಂಬಂಧಪಟ್ಟ ಭೂ ಮಾಲೀಕನ ಅನುಮತಿಯನ್ನು ಪಡೆದುಕೊಳ್ಳಬೇಕಾಗಿತ್ತು.

ಪ್ರಸ್ತುತ ಪ್ರಜಾಪ್ರಭುತ್ವ ವ್ಯವಸ್ಥೆಯ ಕಾಲದಲ್ಲಿ ಇದೇ ಮಾದರಿಯನ್ನು ಅನುಸರಿಸುವುದು ಕಾಣಬಹುದು. ಉದಾಹರಣೆಗೆ ಸರ್ಕಾರದ ಅನೇಕ ಲೋಕೋಪಯೋಗಿ ಕಾಮಗಾರಿಗಳು ನಡೆಯುವಂತಹ ಸಂದರ್ಭದಲ್ಲಿ ಭೂ ಮಾಲೀಕನ ಅನುಮತಿ ಪಡೆದು ಅದಕ್ಕೆ ಸಂದುವ ಪರಿಹಾರಗಳನ್ನು ನೀಡಿ ನಂತರ ತಮ್ಮ ಕಾಮಗಾರಿಯನ್ನು ಮುಂದುವರಿಸುತ್ತಾರೆ. ಈ ಎಲ್ಲ ವಿವರಣೆಗಳಿಂದಾಗಿ ರಾಜ್ಯದ ಭೂಮಿಯ ಒಂದು ಭಾಗ ಮಾತ್ರ ಅರಸರ ಅಧೀನದಲ್ಲಿತ್ತು ಅಥವಾ ರಾಜ್ಯದ ಅಧೀನದಲ್ಲಿತ್ತು ಎನ್ನುವುದು ಸ್ಪಷ್ಟವಾಗುತ್ತದೆ.

ಅರಸರಂತೆ ಖಾಸಗಿ ವ್ಯಕ್ತಿಗಳು ಸ್ವಂತ ಭೂಮಿಯನ್ನು ಹೊಂದಿರುತ್ತಿದ್ದರು. ಖಾಸಗಿ ಭೂಮಾಲೀಕರಲ್ಲೂ ಅನೇಕ ವರ್ಗಗಳಿದ್ದವು. ಅವುಗಳೆಂದರೆ ಶ್ರೀಮಂತ ಭೂಮಾಲೀಕರು, ಮಧ್ಯಮ ವರ್ಗದ ಭೂಮಾಲೀಕರು ಹಾಗೂ ಬಡ ಭೂಮಾಲೀಕರು ಈ ಭೂ ಮಾಲೀಕರು ತಮ್ಮ ಭೂಮಿಗೆ ಸಂಬಂಧಿಸಿದ ಕೆಲಸ ಕಾರ್ಯಗಳನ್ನು ಸ್ವತಂತ್ರವಾಗಿಯೇ ಮಾಡಬಹುದಾಗಿತ್ತು. ರಾಜಪ್ರಭುತ್ವಕ್ಕೆ ಖಾಸಗಿ ಭೂಮಾಲೀಕರ

ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲು ಅವಕಾಶವಿರಲಿಲ್ಲ. ಆದರೆ ಖಾಸಗಿ ಒಡೆಯರ ಭೂಮಿಯ ಮೇಲೆ ತೆರಿಗೆ ವಿಧಿಸುವ ಹಾಗೂ ಅವರ ಹಕ್ಕುಗಳನ್ನು ಮಿತಿಗೊಳಿಸುವ ಅಧಿಕಾರವಿತ್ತು. ಭೂಮಿಯ ಮೇಲೆ ಖಾಸಗಿ ಒಡೆತನವನ್ನು ಸ್ಥಾಪಿಸಬೇಕಾದರೆ ಹಲವಾರು ಬೇಡಿಕೆಗಳನ್ನು ಪೂರೈಸಬೇಕಾಗುತ್ತಿತ್ತು. ಬೇಡಿಕೆಗಳು ಪ್ರಭುತ್ವದ ಹಾಗೂ ಮಧ್ಯಮವರ್ಗದ ರೂಪುಗೊಳ್ಳುವಿಕೆಯ ಸ್ವರೂಪದಿಂದ ಕೂಡಿರುತ್ತಿದ್ದವು. ಭೂಮಿಯನ್ನು ಮಾರಾಟ ಮಾಡುವ, ದಾನ ನೀಡುವ ಹಾಗೂ ಕಾಣಿಕೆ ರೂಪದಲ್ಲಿ ಕೊಡುವ ಹಕ್ಕು ಪ್ರಾಪ್ತವಾಗುವುದು ಒಡೆತನ ಸ್ಥಾಪಿಸಿದಾಗ ಮಾತ್ರ.[3] ಭೂಮಿಯ ಮೇಲೆ ಒಡೆತನವಿಲ್ಲದೆ ಮಾರಾಟ ಮಾಡುವುದು ಅಪರಾದ ಹಾಗೂ ಅದು ಸಾಧ್ಯವಿರಲಿಲ್ಲ. ಸ್ವಂತ ಭೂಮಿಯ ಮೇಲಿನ ಹಕ್ಕು ತಂದೆಯಿಂದ ಮಕ್ಕಳಿಗೆ ಮುಂದುವರಿಯುತ್ತಿತ್ತು. ಭೂಮಿಯನ್ನು ಮಾರಾಟ ಮಾಡಬೇಕಾದರೆ ಕುಟುಂಬದ ಎಲ್ಲ ಸದಸ್ಯರ ಒಪ್ಪಿಗೆಯೂ ಬೇಕಾಗಿರುತ್ತಿತ್ತು.[4] ಅದೇ ರೀತಿ ಅರಸರು ಖಾಸಗಿ ವ್ಯಕ್ತಿಗಳಿಂದ ಭೂಮಿಯನ್ನು ಖರೀದಿಸುತ್ತಿದ್ದರ ಬಗೆಗೂ ಮಾಹಿತಿ ಸಿಗುತ್ತದೆ. ರಾಷ್ಟ್ರೀಯವಾದಿ ಚರಿತ್ರೆಕಾರ ಕೆ.ಪಿ.ಜಯಸ್ವಾಲ್ ಅವರು ಭೂಮಿಯ ಒಡೆತನ ಖಾಸಗಿಯವರದ್ದಾಗಿತ್ತು ಎನ್ನುವ ಅಭಿಪ್ರಾಯ ವ್ಯಕ್ತಪಡಿಸಿದರು. ಬರ್ಟನ್ ಸ್ಟೈನ್ ಭೂಮಿಯ ಒಡೆತನವನ್ನು ಕುರಿತು ಚರ್ಚಿಸುವಾಗ ಖಾಸಗಿ ಒಡೆತನ ಇತ್ತು ಎನ್ನುವ ತೀರ್ಮಾನಕ್ಕೆ ಬರುತ್ತಾರೆ. ಸ್ಟೈನ್ ಅವರು ನೀಲಕಂಠಶಾಸ್ತ್ರೀಯವರ ಕೇಂದ್ರೀಕೃತ ಸರಕಾರ ಕಲ್ಪನೆಗೆ ವಿರುದ್ದವಾಗಿ ತಮ್ಮ ವಾದವನ್ನು ಮಂಡಿಸುತ್ತಾರೆ.[5]

ಭೂಮಾಲೀಕತ್ವದ ಇನ್ನೊಂದು ಮಾದರಿ ಸಮುದಾಯದ ಒಡೆತನ ಅಥವಾ ಸಂಯುಕ್ತ ಒಡೆತನ. ಇಂಥ ಮಾದರಿಯಲ್ಲಿ ಭೂಮಿಯ ಒಡೆತನ ಸಮುದಾಯದ್ದಾಗಿರುತ್ತದೆ. ಮಧ್ಯಕಾಲೀನ ಸಂದರ್ಭದಲ್ಲಿ ಈ ರೀತಿಯ ಭೂಮಾಲೀಕತ್ವವೂ ಇತ್ತು ಎನ್ನುವುದಕ್ಕೆ ಸಾಕಷ್ಟು ಆಧಾರಗಳಿವೆ.[6] ಭೂಮಿಯನ್ನು ಒಂದು ಸಮುದಾಯದ ಜನರು ಪರಸ್ಪರ ಹಂಚಿಕೊಳ್ಳುತ್ತಿದ್ದರು. ಸಮುದಾಯವು ತನ್ನ ಸದಸ್ಯರ ನಡುವೆಯೇ ಇದ್ದ ಭೂಮಾಲೀಕರ ಹಕ್ಕುಗಳನ್ನು ರಕ್ಷಿಸುತ್ತಿತ್ತು. ಇವರೆಲ್ಲರೂ ರಾಜನಿಗೆ ತೆರಿಗೆ ನೀಡುವುದರ ಜೊತೆಗೆ ಸಂಯುಕ್ತ ತೆರಿಗೆಯೊಂದನ್ನೂ ಕೊಡಬೇಕಾಗಿತ್ತು. ಸಮುದಾಯಗಳಲ್ಲೂ ಶ್ರೇಣೀಕೃತ ವ್ಯವಸ್ಥೆಯಿದ್ದು, ಕೂಲಿಯಾಳು, ಗುಲಾಮರು, ಗೇಣಿ ರೈತರು, ಸ್ವತಂತ್ರ ಸದಸ್ಯರು ಮುಂತಾದವರಿರುತ್ತಿದ್ದರು. ಸಮುದಾಯದ ಕೆಳಸ್ತರದಲ್ಲಿರುವ ಶೋಷಿತ ಜನರು ಯಾವುದೇ ಉತ್ಪಾದನಾ ಸಾಧನಗಳನ್ನು ಹೊಂದಿರಲಿಲ್ಲ. ಇದು ಸಮುದಾಯದ ಒಡೆತನದಲ್ಲಷ್ಟೇ ಅಲ್ಲದೇ ಭೂಮಾಲೀಕತ್ವದ ಇತರ ಮಾದರಿಗಳಲ್ಲೂ ಕಂಡುಬರುತ್ತದೆ. ಸಾಮುದಾಯಿಕ ಭೂ ಒಡೆತನವು ಖಾಸಗಿ ಒಡೆತನವಾಗಿದ್ದರೂ ಕೆಲವೊಂದು ವೈಶಿಷ್ಟ್ಯತೆಗಳಿಂದ ಕೂಡಿದ್ದಾಗಿದೆ.[7] ಜಂಟಿ ಒಡೆತನದಲ್ಲಿದ್ದ ಭೂಮಿಯ ಮಾರಾಟ ಮಾಡಬೇಕಿದ್ದರೆ, ಇಲ್ಲವೆ ದಾನ ನೀಡಬೇಕಿದ್ದರೆ ಎಲ್ಲರೂ ಒಟ್ಟಾಗಿ ತೀರ್ಮಾನ ತೆಗೆದುಕೊಳ್ಳುತ್ತಿದ್ದರು. ಇದಕ್ಕೆ ಅನೇಕ ಉದಾಹರಣೆಗಳು ಶಾಸನಗಳಲ್ಲಿ ಸಿಗುತ್ತವೆ. ಅಂಥ ಒಂದು ಉದಾಹರಣೆಯನ್ನು ಇಲ್ಲಿ ಕೊಡಲಾಗಿದೆ: ಎರಡುನೂರು ಮಹಾಜನರು ಆರನೆಯ ವಿಕ್ರಮಾದಿತ್ಯನ ಸೇವಕ ಮಹಾದೇವ ನಾಯಕ ಎನ್ನುವವನಿಂದ ಹಣ ಪಡೆದು ಭೂಮಿಯನ್ನು ನೀಡಿದನು.[8] ಈ ಮಾಹಿತಿಯು ಮಹಾಜನರೆನ್ನುವ ಹಳ್ಳಿಯ ಮುಖಂಡರು ಭೂಮಿಯ ಒಡೆತನವನ್ನು ಜಂಟಿಯಾಗಿ ಹೊಂದಿದ್ದರೆಂಬುದಾಗಿ ತಿಳಿಸುತ್ತದೆ. ಜಂಟಿಯಾಗಿ ಹೊಂದಿರುವ ಭೂಮಿಯನ್ನು ಪರಸ್ಪರ ಹಂಚಿಕೊಳ್ಳುವಾಗ ಮನಸ್ತಾಪಗಳು ಉಂಟಾಗುತ್ತಿದ್ದರಿಂದ ಎಲ್ಲರಿಗೂ ಸಮಾನವಾಗಿ

ಭೂಮಿ ಸಿಗುವಂತೆ ನೋಡಿಕೊಳ್ಳಲು ಎಲ್ಲರೂ ಒಟ್ಟಿಗೆ ಸೇರಿ ಶಾಶ್ವತವಾಗಿ ಗಡಿಗಳನ್ನು ನಿರ್ಧರಿಸುತ್ತಿದ್ದರು.

ಧಾರ್ಮಿಕ ಹಾಗೂ ಸಾರ್ವಜನಿಕ ಸೇವೆಗೆಂದು ದಾನದ ರೂಪದಲ್ಲಿ ಪಡೆದ ಭೂಮಿ ಭೂಮಾಲೀಕತ್ವವನ್ನು ಪಡೆಯುವುದಕ್ಕೆ ಕಾರಣವಾಗಿರುವುದು ಕ್ರಿ.ಶ.14 ರಿಂದ 18ನೆಯ ಶತಮಾನದ ಚರಿತ್ರೆಯಿಂದ ತಿಳಿದುಬರುತ್ತದೆ. ದಾನದ ರೂಪದಲ್ಲಿ ಭೂಮಿಯನ್ನು ಪಡೆದ ವ್ಯಕ್ತಿ ಅಥವಾ ಸಂಸ್ಥೆಯೇ ಆ ಭೂಮಿಯ ಮೇಲಿನ ಒಡೆತನವನ್ನು ಹೊಂದಿರುತ್ತಿದ್ದರು. ಬ್ರಾಹ್ಮಣರಿಗೆ ನೀಡುತ್ತಿದ್ದ ದಾನ ಬ್ರಹ್ಮದೇಯವಾಗಿದ್ದು ಅದು ಹೊಸ ಬ್ರಾಹ್ಮಣ ಭೂಮಾಲೀಕ ವರ್ಗವನ್ನು ಸೃಷ್ಟಿಸಿತು.[9] ಅದೇ ರೀತಿ ದೇವಾಲಯಗಳಿಗೆ ನೀಡುತ್ತಿದ್ದ ದಾನ ದೇವದಾನವಾಗಿದ್ದು, ಅದು ದೇವಾಲಯಗಳು ಭೂಮಾಲೀಕರಂತೆ ವರ್ತಿಸುವಂತೆ ಮಾಡಿತು. ಅರಸರಿಗಾಗಿ, ದೇವಾಲಯಗಳಿಗಾಗಿ, ಕೆರೆ–ಕಾಲುವೆಗಳ ನಿರ್ಮಾಣಕ್ಕಾಗಿ, ಹಳ್ಳಿಯ ಮುಖಂಡರಿಗಾಗಿ ದುಡಿದ ಜನರಿಗೆ ಅವರ ಸೇವೆಗಾಗಿ ಭೂಮಿಯನ್ನು ದಾನ ನೀಡಲಾಗುತ್ತಿತ್ತು.[10] ಈ ಪ್ರಕ್ರಿಯೆಗಳು ರಾಜ್ಯದೊಳಗೆ ಹೊಸ ಭೂಮಾಲೀಕ ವರ್ಗಗಳು ಹುಟ್ಟಿಕೊಳ್ಳುವುದಕ್ಕೆ ಕಾರಣವಾದವು. ಹೆಚ್ಚೆಚ್ಚು ಭೂಮಿಯನ್ನು ದಾನ ನೀಡುವುದರ ಮೂಲಕ ಒಟ್ಟಾರೆಯಾಗಿ ರಾಜ್ಯದ ಮೇಲೆ ಹತೋಟಿಯನ್ನು ಸಾಧಿಸುವುದು ಸಾಧ್ಯವಿರಲಿಲ್ಲ. ಆ ಕಾರಣಕ್ಕಾಗಿಯೇ ಧರ್ಮದ ಮೊರೆಹೋಗುವುದು ಅನಿವಾರ್ಯವಾಯಿತು. ಒಟ್ಟು ಅರ್ಥವ್ಯವಸ್ಥೆ ಭೂ ಆಧಾರಿತವಾಗಿರುವುದರಿಂದ ಭೂಮಿಯ ಖಾಸಗಿ ಒಡೆತನ ಹೆಚ್ಚು ಪ್ರಾಮುಖ್ಯತೆಯನ್ನು ಗಳಿಸಿಕೊಂಡಿತು. ಇದು ಭೂ ಮಾಲೀಕ ಮಧ್ಯವರ್ತಿಗಳ ಹುಟ್ಟಿಗೂ ಕಾರಣವಾಯಿತು.[11]

ಪ್ರಸ್ತುತ ಲೇಖನದಲ್ಲಿ ಭೂ ಮಾಲೀಕತ್ವದ ಜೊತೆಗೆ ರಾಜರು ತಮ್ಮ ಆಡಳಿತದ ಅನುಕೂಲಕ್ಕಾಗಿ ತಮ್ಮ ವ್ಯಾಪ್ತಿಯ ಭೂಮಿಯನ್ನು ವಿಭಾಗಿಸಿದ ಬಗೆಯ ಕುರಿತು ಅಧ್ಯಯನ ನಡೆಸಲಾಗಿದೆ. ಈ ಪ್ರದೇಶಗಳಲ್ಲಿ ಕಂಡುಬರುವ ಶಾಸನಗಳ ದಾಖಲೆಯ ಪ್ರಕಾರ ರಾಜ್ಯ, ನಾಡು, ಸೀಮೆ, ಸ್ಥಳ ಎಂಬ ಉಲ್ಲೇಖಗಳು ಕಂಡುಬರುತ್ತವೆ. ಅಂಕಸಮುದ್ರ ನಾಡು, ಅಣಜಿ ಸ್ಥಳ, ಅಣಬೂರು ಸ್ಥಳ, ಹರಳಿಹಾಳ ಸ್ಥಳ,[12] ಉಚ್ಚಂಗಿ ವೇಂಠೆ, ಉಕ್ಕಟೇಯ ವಳಿತ ಎಂಬ ಉಲ್ಲೇಖಗಳಿವೆ. ವೇಂಠೆ, ವಳಿತ ಇವು ವಿಜಯನಗರ ಕಾಲದಲ್ಲಿಯೇ ಬಳಕೆಯಲ್ಲಿದ್ದವು. ನಾಯಕರ ಆಡಳಿತ ಅವಧಿಯಲ್ಲಿ ಅನೇಕ ಆಡಳಿತ ವರ್ಗಗಳನ್ನು ಈ ಕೇಂದ್ರಗಳಲ್ಲಿ ನೇಮಿಸಲಾಗುತ್ತಿತ್ತು.

ಚಿತ್ರದುರ್ಗ ರಾಜ್ಯ ಬೊಕ್ಕಸದ ಆದಾಯದ ಮೂಲಗಳೆಂದರೆ ಗದ್ದೆ, ಬೆದ್ದಲು, ಕಾಡಾರಂಬ, ಮಾರ್ಗಸುಂಕ, ಸ್ಥಳಸುಂಕ, ಹುಲ್ಲುಬನ್ನಿ, ಷರಾಬು, ಉಪ್ಪಿನ ಮೋಳೆ, ಆಚಾರಗಾಣಿಕೆ, ಯುದ್ಧದಲ್ಲಿ ಶಸ್ತ್ರಾಸ್ತ್ರ ಇತ್ಯಾದಿ.

ಮುಖ್ಯವಾಗಿ ನಾಯಕರು ಗ್ರಾಮಗಳ ಆಳ್ವಿಕೆಗಾಗಿ ಬಾರಾಬಲೂತಿಯನ್ನು ಏರ್ಪಡಿಸಿದ್ದರು. ಇದರಲ್ಲೇ ನಿಜ ಆಯಗಾರರು ಮತ್ತು ಅರೆ ಆಯಗಾರರು ನೇಮಕವಾಗಿದ್ದರು. ನಿಜ ಆಯಗಾರರು ಎಂದರೆ ಗೌಡ, ಶಾನುಭೋಗ, ಬಡಗಿ, ಕಮ್ಮಾರ, ತಳವಾರ, ಬೇಗಾರರು. ಅರೆ ಆಯಾಗಾರರು ಎಂದರೆ ಜೋಯಿಸ, ಕುಲಾಲ(ಕುಂಬಾರ), ನಾಪಿತ, ರಜಕ (ಅಗಸ), ಬಾರಿಕ (ನೀರಗಂಟಿ), ಅಕ್ಕಸಾಲಿ ಮುಂತಾದವರು.[13] ಅನೇಕ ವೇಳೆ ಬಾರಾಬಲೂತಿಯ ವೃತ್ತಿಗಾರರನ್ನು ಸಂತೈಸಲೂ ದುರ್ಗದ ನಾಯಕರು ಕೆಲವು ಸವಲತ್ತುಗಳನ್ನು ನೀಡುತ್ತಿದ್ದ ಅಂಶವು ಶಾಸನಗಳಿಂದ ತಿಳಿದುಬರುತ್ತದೆ. ಬೂದಿಹಾಳು ಗ್ರಾಮದಲ್ಲಿ ಕಂಡುಬರುವ 12 ಜನ ಆಯಗಾರರಲ್ಲಿ ನಾಯಂದಿರ ಕುರಿತ ಶಾಸನದ ಪಾಠ ಈ ರೀತಿ ಇದೆ. "ಬೂದಿಹಾಳು ಸೀಮೆಗೆ ಸಲ್ಲುವ ಹಳ್ಳ ಹಿರಿಯೂರೊಳುಳ್ಳ ನಾಯಂದಿರರು ಕೆರೆಯ ಕೆಳಗಿನ ಸ್ವಾಮ್ಯವನ್ನು ಅನುಭವಿಸಿಕೊಂಡು ಬರತಕ್ಕದ್ದು"[14] ಎಂಬ ನಿರೂಪದಿಂದ ನಾಯಂದರಲ್ಲಿ ಆಡಳಿತದಿಂದ

ಸಿಗುವ ಭೂಮಿಯ ಅಸಮಧಾನವನ್ನು ತೊಲಗಿಸಲು ಸಾಧ್ಯವಾಯಿತು.

ಆಡಳಿತದ ಸುಗಮಕ್ಕಾಗಿ ನಾಯಕರು ಸಂಸ್ಥಾನವನ್ನು ಹಲವಾರು ವಿಭಾಗಗಳಾಗಿ ವಿಂಗಡಿಸಿಕೊಂಡಿದ್ದು, ಗ್ರಾಮ, ಸೀಮೆ, ಮಾಗಣಿ, ಸ್ಥಳ, ಸಮ್ಮತು, ನಾಡು, ಪಟ್ಟಡಿ ಇತ್ಯಾದಿ ಇವುಗಳನ್ನು ತೆರಿಗೆ ಉತ್ಪನ್ನದ ಆಧಾರದ ಮೇಲೆ ವಿಂಗಡಿಸಲಾಗಿತ್ತು.[15] ಉದಾಹರಣೆಗೆ ಇಮ್ಮಡಿ ಮದಕರಿನಾಯಕನು ಮರಣ ಹೊಂದಿದಾಗ ಅವನ ಒಟ್ಟು ಆಳ್ವಿಕೆಯಲ್ಲಿ 10,0030 ವರಹ ತೆರಿಗೆಯ ಸೀಮೆಯಿತ್ತು. ಈ ಸೀಮೆಯನ್ನು ಭಾಗಗಳಾಗಿ ವಿಂಗಡಿಸಿ ಗುರುಕರಣ, ಕರಣಿಕ ಬೋನಪ್ಪ, ಬೋನಪ್ಪ ಅಬಿಗೆರೆ ಮಲ್ಲಣ್ಣ, ಕರಣಿಕ ಅಪ್ಪಣ್ಣ ಮುಂತಾದವರನ್ನು ನೇಮಿಸಲಾಯಿತು. ರಾಜ್ಯದಲ್ಲಿ ಆಡಳಿತದ ನೆರವಿಗೆ ದಳವಾಯಿಗಳನ್ನು ನೇಮಿಸಲಾಗಿತ್ತು. ನಾಯಕರಿಗೆ ಅಂಗರಕ್ಷಕರು ಇದ್ದರು. ಉದಾಹರಣೆಗೆ ಇಮ್ಮಡಿ ಮದಕರಿ ನಾಯಕನಿಗೆ ಬಿಳಿಚೋಡು ಹನುಮಯ್ಯ, ಬಾಣದ ನಿಂಗಯ್ಯ, ಹಿರೀಸೇರುವೆಗಾರ ಕೆಂಚಯ್ಯ, ಸರಳೆಮ್ಮ ಕಾಟಯ್ಯ, ಅಪ್ಪರಸಯ್ಯ, ನರಸಿಂಹಬನಿಟ್ಟಾ ಅಕ್ಕಸಾಲೆ, ಕಂಠಮಾಲೆ ಮುಂತಾದವರು ಇದ್ದರು.[16]

ಮೇಲೆ ವಿವರಿಸಿದಂತೆ ಅನೇಕ ಶಾಸನಗಳು ನಾಯಕರು ಅಧಿಕಾರಿಗಳಿಗೆ, ಅಗ್ರಹಾರಗಳಿಗೆ, ದೇವಾಲಯಗಳಿಗೆ ದಾನ ನೀಡಿದ ಅಂಶಗಳು ಪುಷ್ಠೀಕರಿಸುತ್ತವೆ. ಭೂದಾನ ಪಡೆದಿರುವ ಎಲ್ಲ ವರ್ಗವು ಹೆಚ್ಚಾಗಿ ಭೂಮಾಲೀಕತ್ವವನ್ನು ಪಡೆದವರೇ ಆಗಿರಬೇಕು. ಭೂದಾನ ನೀಡುವ ಸಂದರ್ಭದಲ್ಲಿ ಸೀಮೆ(ಗಡಿ)ಯ ನಿರ್ದೇಶನ ಹಾಗೂ ಭೂಮಿಯ ಒಡೆತನ ಹೆಸರು ಶಾಸನದಲ್ಲಿ ಇರುವುದನ್ನು ನೋಡಿದರೆ ಅಂದಿನ ಸರಕಾರ ಭೂ ಒಡೆತನದ ವಿಷಯವಾಗಿ ಹೆಚ್ಚು ಕಾಳಜಿವಹಿಸಿದಂತೆ ಕಾಣುತ್ತದೆ.

ನಾಯಕರು ಅಷ್ಟೆ ಅಲ್ಲದೆ ಅನೇಕ ಜನರು ಭೂ ದಾನ ನೀಡಿದ ಅಂಶಗಳಿವೆ. ಹೊಲವನಹಳ್ಳಿಯ ಇಮ್ಮಡಿ ರಣಭೈರೇಗೌಡನು ಬಾಬುರಾಯನಿಗೆ ಭೂದಾನ ನೀಡಿರುವನು.[17] ಎಣ್ಣೆಗೆರೆಯ ಲಿಂಗಯ್ಯ ಗೌಡನು ಪಲ್ಲಕ್ಕಿ ತಿಮ್ಮ ವೀರಗಾರು ಎಂಬುವನಿಗೆ ಭೂದಾನ ಮಾಡಿದನು. ಮಾರ್ಗ ಸಹಯ್ಯ ನಾಯಕನು ಗಂಗನರಸಿ ಗ್ರಾಮವನ್ನು ತನ್ನ ಒಡೆಯನಿಗೆ ಒಳ್ಳೆಯದಾಗಲೆಂದು ದಾನ ನೀಡಿದನು.[18] ಮಾಯಕೊಂಡದ ನಾಯಕನು ಬಳ್ಳಾಪುರ ಗ್ರಾಮವನ್ನು ದಾನವಾಗಿಕೊಟ್ಟನು.[19] ಹಿರೇ ಮದಕರಿನಾಯಕನು ಚತುರ್‌ಸೀಮೆಯ ಗ್ರಾಮಗಳ ಮುಖ್ಯಸ್ಥರ ಮುಂದೆ ಆನೆಸಿದ್ರಿಯ ಹೊಲಕ್ಕೆ ಸೀಮಾ ಕಲ್ಲುಗಳನ್ನು ನೆಡಿಸಿ ಕವಿ ಕೋನಪ್ಪನಿಗೆ ಅಗ್ರಹಾರ ದಾನ ಮಾಡಿದನು.[20] ಈ ಎಲ್ಲ ಸಂಗತಿಗಳು ಅಧಿಕಾರಿವರ್ಗ ಹಾಗೂ ಪ್ರಭುತ್ವ ಭೂದಾನ ಮಾಡುವುದರ ಮೂಲಕ ತಮ್ಮ ಗೌರವ, ಕೀರ್ತಿಯನ್ನು ಹೆಚ್ಚಿಸಿಕೊಳ್ಳುವ ಸಲುವಾಗಿ ದಾನವನ್ನು ನೀಡಿ ತಮ್ಮ ಅಧಿಕಾರದ ನೆಲೆಗಳನ್ನು ಗುರುತಿಸಿಕೊಂಡಿರುವುದನ್ನು ಸೂಚಿಸುತ್ತವೆ.

**ಕೃಷಿ ಭೂಮಿಯ ವರ್ಗೀಕರಣ**

ಪ್ರಾಚೀನ ಕಾಲದಿಂದಲೂ ಭೂಮಿಯನ್ನು ಅದರ ಫಲವತ್ತತೆಗೆ ಅನುಗುಣವಾಗಿ ವರ್ಗೀಕರಿಸುತ್ತಾ ಬಂದಿದ್ದು ಸಾಮಾನ್ಯವಾಗಿ ನೀರಾವರಿ ಭೂಮಿ, ಒಣಭೂಮಿ, ತೋಟ, ಅರಣ್ಯ ಭೂಮಿ, ಗೋಮಾಳ, ಹುಲ್ಲುಗಾವಲು ಪ್ರದೇಶ ಮತ್ತು ಬಂಜರು ಭೂಮಿ ಎಂದು ವಿವಿಧ ಬಗೆಯಲ್ಲಿ ವಿಂಗಡಿಸಿರುವುದನ್ನು ಕಾಣುತ್ತೇವೆ. ಈ ವರ್ಗೀಕರಣವನ್ನು ನೀರು ಮತ್ತು ಮಳೆಯನ್ನು ಆಶ್ರಯಿಸಿ ಮಾಡಲಾಗಿದೆ.[21]

ನಾಯಕರ ಕಾಲದ ಕೃಷಿಕರು ವಿವಿಧ ಬಗೆಯ ಭೂಮಿಯಲ್ಲಿ ಬೇಸಾಯ ಮಾಡುತ್ತಿದ್ದರು. ಮಣ್ಣು, ನೀರು, ಸ್ವಾಭಾವಿಕ ಸಸ್ಯವರ್ಗಗಳನ್ನು ಉಪಯೋಗಿಸಿಕೊಳ್ಳುವ ಜಾಣ್ಮೆ ಹಿಂದಿನ ತಲೆಮಾರಿನವರೆಗೆ ಕರಗತವಾಗಿತ್ತು. ಇತರೆ ಪ್ರಾಂತೀಯ ಬೇಸಾಯ ಪದ್ಧತಿಗಳನ್ನೇ ಈ ಪ್ರದೇಶದ

ಜನರು ರೂಢಿಸಿಕೊಂಡಿದ್ದರು. ಕೃಷಿ ಭೂಮಿ ಅನೇಕ ವಿಧದಲ್ಲಿ ಚಾಲ್ತಿಯಲ್ಲಿತ್ತು ಎಂದು ಶಾಸನ ಮತ್ತು ಸಾಹಿತ್ಯಿಕ ಗ್ರಂಥಗಳಲ್ಲಿ ಉಲ್ಲೇಖಿಸಲಾಗಿದೆ. ಇವುಗಳಿಂದ ಕೃಷಿ ಭೂಮಿಯನ್ನು ಎರಡು ಭಾಗವಾಗಿ ವಿಂಗಡಿಸಲಾಗಿದೆ. ಅವುಗಳೆಂದರೆ ಸಾಗುವಳಿಯಲ್ಲದ ಬೀಳು ಭೂಮಿ, ಮತ್ತು ಸಾಗುವಳಿ ಭೂಮಿ

**ಸಾಗುವಳಿಯಲ್ಲದ ಬೀಳು ಭೂಮಿ**

ಬೀಳು ಭೂಮಿಯೆಂದರೆ ಕೃಷಿಗೆ ಯೋಗ್ಯವಲ್ಲದ ಭೂಮಿ. ಹೊಸ ಊರುಗಳ ಸೃಷ್ಟಿಯೊಂದಿಗೆ ಅದರ ಸುತ್ತಮುತ್ತಲೂ ಕೃಷಿಗೆ ಯೋಗ್ಯವಾಗುವಂತೆ ಭೂಮಿಯನ್ನು ಮಾರ್ಪಡಿಸುತ್ತಿದ್ದರು. ಬೀಳು ಭೂಮಿಯನ್ನು ಪಶುಪಾಲನೆಗಾಗಿ ಹುಲ್ಲುಗಾವಲೆಂದು ಉಪಯೋಗಿಸುತ್ತಿದ್ದರು. ಒಂದು ವೇಳೆ ನಾಡಿನಲ್ಲಿ ಬೀಳು ಭೂಮಿ ಇರದಿದ್ದರೆ, ನೂರು ಬಿಲ್ಲಳತೆಯ ಭೂಮಿಯನ್ನು ಹುಲ್ಲುಗಾವಲಿಗೆ ಕಾಯ್ದಿಡಬೇಕೆಂದು ಯಾಜ್ಞವಲ್ಕ್ಯ ಸ್ಮೃತಿಯಲ್ಲಿ ಹೇಳಿದೆ. ಇದರಿಂದ ಹುಲ್ಲುಗಾವಲಿಗೆ ಮತ್ತು ಪಶುಪಾಲನೆಗೆ ಆ ಜನ ಎಷ್ಟು ಮಹತ್ವಕೊಡುತ್ತಿದ್ದರೆಂಬುದು ಗೊತ್ತಾಗುತ್ತದೆ. ಹೀಗಾಗಿ ಊರಿಗೊಂದು ಗೋಮಾಳ,[22] ಇದ್ದೇ ಇರುತ್ತಿತ್ತು. ಗೋಮಾಳ ಎಂದರೆ ಗೋವು(ಪಶುಪಾಲನೆಗೆ)ಗಳಿಗೆ ಹುಲ್ಲಿಗಾಗಿ ಮೀಸಲಿರಿಸಿದ ಸ್ಥಳ. ಭೌಗೋಳಿಕವಾಗಿ ಚಿತ್ರದುರ್ಗ ಪ್ರದೇಶ ಕರ್ನಾಟಕ ರಾಜ್ಯದ ಮಧ್ಯರಂಗವನ್ನು ಆಕ್ರಮಿಸಿಕೊಂಡಿರುವ ಕೇಂದ್ರವೆನಿಸುತ್ತದೆ. ಇಲ್ಲಿ ಐದು ಸಮಾಂತರ ಸಾಲಿನ ಬೆಟ್ಟಗಳು ಹಾದು ಹೋಗುವುದರಿಂದ ಹೆಚ್ಚಿನ ಬೆಟ್ಟಪಂಕ್ತಿಯು ಸುತ್ತುವರೆದಿದ್ದರಿಂದ ಬೀಳು ಭೂಮಿ ಹೆಚ್ಚಾಗಿ ಕಂಡುಬರುತ್ತದೆ. ಇಲ್ಲಿ ರೈತಾಪಿ ಜನರ ಆರ್ಥಿಕ ಮಟ್ಟವನ್ನು ಹೆಚ್ಚಿಸಿಕೊಳ್ಳಲು ಅಲ್ಲಿನ ಭೌಗೋಳಿಕತೆಗೆ ಅನುಗುಣವಾಗಿ ಬುಡಕಟ್ಟು ಜನರು ವಾಸವಾಗಿದ್ದು, ಇಲ್ಲಿನ ಬೆಟ್ಟಗುಡ್ಡಗಳಲ್ಲಿ ತಮ್ಮ ಪಶು ಸಂಪತ್ತನ್ನು ಸಲಹುತ್ತಿದ್ದರು. ಚಳ್ಳಕೆರೆ ತಾಲೂಕಿನ ಶಾಸನವೊಂದರಲ್ಲಿ 'ಹುಲುಮನಿ ಕಾವಲನು ಬಿಟ್ಟು ಗೋ ದನಗಳು ಕೆರೆ ಒಳಗೆ ಮೆಯಿದು ನೀರು ಕುಡಿದು' ಇರಲೆಂದು ಹೇಳಿದೆ.[23]

ಬೀಳು ಭೂಮಿ ಅಥವಾ ಬಂಜರು ಭೂಮಿ ಎಂದು ಕರೆಯಲ್ಪಡುವ ಭೂಮಿ ಶಾಸನಗಳಿಂದ ಗುರುತಿಸುವುದು ಸ್ವಲ್ಪ ಕಷ್ಟ. ಕೆಲವು ಪ್ರಸಂಗಗಳಲ್ಲಿ ಬರುವ ಬೆಟ್ಟ, ಗುಡ್ಡ, ಮಟ್ಟಿ ಎಂಬ ಉಲ್ಲೇಖಗಳಿಂದ ಈ ಭೂಮಿಯನ್ನು ಗುರುತಿಸಬಹುದಾಗಿದೆ.

ಪಂಡಿತ ಎಸ್.ಬಸಪ್ಪ ಸಂಪಾದಿಸಿರುವ 'ದೇವಕವಿ ಕೃತ ಮರುಳಸಿದ್ದ' ಕಾವ್ಯದಲ್ಲಿ ದಟ್ಟಡವಿ, ವನವೃಕ್ಷಗಳ ಉಲ್ಲೇಖಗಳಿವೆ. ವಿದೇಶಿ ಪ್ರವಾಸಿ ಬುಕಾನನ್ ಶಿವಮೊಗ್ಗದಿಂದ ಸಾಸ್ವೆಹಳ್ಳಿಯ ಗುಡ್ಡ ಬೆಟ್ಟಗಳ ಶ್ರೇಣಿಯನ್ನು ದಾಟಿ ಬಸವಾಪಟ್ಟಣಕ್ಕೆ ಬರುತ್ತಾನೆ. ಹಾಗೆಯೇ ಸಿದ್ದವ್ವನಹಳ್ಳಿ ಪ್ರದೇಶದ ಗುಡ್ಡಗಳನ್ನು ವಿವರಿಸುತ್ತಾನೆ.[24]

**ಸಾಗುವಳಿ ಭೂಮಿ**

ನಾಯಕರ ಕಾಲದ ಶಾಸನಗಳು, ಸಾಹಿತ್ಯಿಕ ಗ್ರಂಥಗಳು ಹಾಗೂ ವಿದೇಶಿ ಪ್ರವಾಸಿಗರ ಬರವಣಿಗೆಗಳಿಂದ ಮಣ್ಣಿನ ಫಲವತ್ತತೆ, ನೀರಾವರಿ ಸೌಕರ್ಯ, ಮಳೆಯ ಪ್ರಮಾಣ, ಉತ್ಪಾದನೆಯ ಮಟ್ಟ, ತೆರಿಗೆ ಮುಂತಾದವುಗಳ ಆಧಾರದ ಮೇಲೆ ಕೃಷಿ ಅಥವಾ ಸಾಗುವಳಿ ಭೂಮಿಯನ್ನು ನಿರ್ಧರಿಸಬಹುದಾಗಿದೆ.

ಕೃಷಿಯ ವಿಸ್ತರಣೆ ಅಷ್ಟೊಂದು ಸುಲಭದ ಕೆಲಸವಾಗಿರಲಿಲ್ಲ. ಕಾಡುಗಳನ್ನು ಕಡಿದು, ಭೂಮಿಯನ್ನು ಸಮತಟ್ಟುಗೊಳಿಸಿ ಕೃಷಿ ಯೋಗ್ಯ ಭೂಮಿಯನ್ನಾಗಿ ಮಾಡಬೇಕಾಗಿತ್ತು. ಈ ಪ್ರಕ್ರಿಯೆ ಹೆಚ್ಚಾಗಿ ಚುರುಕುಗೊಂಡಿದ್ದು ನಾಯಕರ ಕಾಲದಲ್ಲಿಯೇ. ಈ ಕಾರಣಕ್ಕಾಗಿಯೇ ಕೃಷಿ ಭೂಮಿಯನ್ನು ವಿಸ್ತರಿಸುವ ಜನರಿಗೆ ರಾಜ್ಯವು ಸಹಾಯ ಸಹಕಾರಗಳನ್ನು ನೀಡುತ್ತಿತ್ತು. ಅಂಥ ವ್ಯಕ್ತಿಗಳಿಗೆ ಅಥವಾ ಸಮುದಾಯಗಳಿಗೆ ಭೂಮಿಯನ್ನು ದಾನ ನೀಡಲಾಗುತ್ತಿತ್ತು. ತೆರಿಗೆ ವಿನಾಯಿತಿಯನ್ನೂ ನೀಡಲಾಗುತ್ತಿತ್ತು.[25] ಹೊಸದಾಗಿ

ನಿರ್ಮಾಣಗೊಳ್ಳುವ ಹಳ್ಳಿಗಳು ರೈತರ ಅಧೀನಕ್ಕೆ ಒಳಪಟ್ಟಿರಲಿಲ್ಲ. ಅವು ಮಹಾಜನರ ಇಲ್ಲವೇ ಗ್ರಾಮಗಳ ಅಧಿಕಾರಗಳ ಅಧೀನದಲ್ಲಿರುತ್ತಿದ್ದವು. ಅದೇ ರೀತಿ ಭೂಮಾಲೀಕರು ಹಳ್ಳಿಗಳ ಮೇಲೆ ಹಿಡಿತವನ್ನು ಹೊಂದಿದ್ದರು. ಈ ಕಾರಣದಿಂದಾಗಿ ಕೃಷಿಯ ವಿಸ್ತರಣೆ ಅರಸರಿಗೆ ಮತ್ತು ಭೂಮಾಲೀಕರಿಗೆ ಹೆಚ್ಚು ಲಾಭದಾಯಕವಾಗಿರುತ್ತಿತ್ತು. ರೈತರು ಹೆಚ್ಚು ಕಡಿಮೆ ಕೂಲಿಯಾಳುಗಳಾಗಿ ಕೆಲಸ ಮಾಡಬೇಕಾಗುತ್ತಿತ್ತು. ಈ ಬೆಳವಣಿಗೆಗಳು ಕ್ರಿ.ಶ.15ರಿಂದ 18ನೇ ಶತಮಾನಗಳ ಅವಧಿಯಲ್ಲಿ ಹೆಚ್ಚಾಗಿ ಕಂಡುಬಂತು. ಅಂದಿನ ಕಾಲದ ತೆರಿಗೆಗಳ ಉಲ್ಲೇಖ ಶಾಸನಗಳಲ್ಲಿ ಕಂಡು ಬರುವುದರಿಂದ ಸಾಗುವಳಿ ಭೂಮಿಯನ್ನು ಗುರುತಿಸಬಹುದಾಗಿದೆ. ನಾಯಕರ ಕಾಲದ ಕಂದಾಯ ವ್ಯವಸ್ಥೆಯಲ್ಲಿ ಕೆಳದಿ ಶಿವಪ್ಪನಾಯಕ ಶಿಸ್ತು ಪದ್ದತಿಯ ಅನ್ವಯ ಭೂಮಿಯನ್ನು ಫಲವತ್ತತೆಗೆ ಅನುಗುಣವಾಗಿ ಐದು ಭಾಗಗಳಾಗಿ ವಿಂಗಡಿಸಲಾಗಿತ್ತು.

1. ಉತ್ತಮ : ಮರಳು ಮಿಶ್ರಿತ ಎರೆಮಣ್ಣು.
2. ಮಧ್ಯಮ : ಬೆಟ್ಟದ ಅಥವಾ ಎತ್ತರವಾಗಿ ಬಯಲಾಗಿರುವ ಕೆಂಪು ಮಿಶ್ರಿತ ಮಣ್ಣು.
3. ಕನಿಷ್ಠ : ಕಪ್ಪು ಅಥವಾ ಶಾಮಲ ವರ್ಣದ ಮರಳು ಮಿಶ್ರಿತ ಮಣ್ಣು.
4. ಅಧಮ: ಗಟ್ಟಿಯಾದ ಭೂಮಿ.
5. ಅಧಮಾಧಮಾ: ಒಣಕಲು ಭೂಮಿ (ಬಂಜರು)[26]

ಶಿವಪ್ಪನಾಯಕನು ಫಲವತ್ತತೆಯ ಆಧಾರದಲ್ಲಿ ವಿಭಾಗಿಸಿದ ಮಾದರಿಯ ಭೂಮಿಯು ಚಿತ್ರದುರ್ಗ ಪ್ರದೇಶದಲ್ಲಿಯೂ ಕಾಣಸಿಗುತ್ತದೆ.

ಕ್ರಿ.ಶ.1653ರಲ್ಲಿ ಓಬಣ್ಣ ನಾಯಕನು ಪುಟ್ಟಣ್ಣನ ಮಗನಾದ ತಿಮ್ಮಪ್ಪನಿಗೆ ಹಿರೇಗುಂಟನೂರು ಮಾಗಣಿಯ ಚಿತ್ರಳ್ಳಿ ಸೀಮೆಗೆ ಸೇರಿದ ಕಡಲೆಗುದ್ದು ಗ್ರಾಮದಲ್ಲಿ ಒಣ ಹಾಗೂ ಗದ್ದೆ ಭೂಮಿಯನ್ನು ದಾನ ನೀಡುವ ಅಂಶವಿದೆ. ಚಿತ್ರದುರ್ಗದ ಬಳಿಯ ಚಂದ್ರವಳ್ಳಿ ಕೆರೆ ಪ್ರದೇಶ ಪ್ರಾಚೀನವಾದುದು. ಚಿತ್ರದುರ್ಗ ಸಮೀಪದ ಗಾರೆ ಹಟ್ಟಿಯಲ್ಲಿನ ಚೋಳೇಶ್ವರ ದೇವಸ್ಥಾನದ ಶಾಸನ(ಸಂಖ್ಯೆ 34) ಮತ್ತು ವಿಜಯನಗರ ಕಾಲದ ಹಿರೇಗುಂಟನೂರು ಶಾಸನದಲ್ಲಿ ಜಮೀನುಗಳ ವರ್ಗೀಕರಣ ಎರೆ, ಬೆದ್ದು, ಗದ್ದೆ, ಕೆನ್ನೆಲ ಮತ್ತು ತೋಟ ಇತ್ಯಾದಿ ದಾಖಲಿಸಲ್ಪಟ್ಟಿವೆ.[27]

ಮಳೆಯನ್ನೇ ಅವಲಂಬಿಸಿ ವ್ಯವಸಾಯ ಮಾಡಬೇಕಾಗಿದ್ದ ಜಮೀನನ್ನು ಹೊಲ ಮತ್ತು ಬೆದ್ದಲು ಎಂದು ಕರೆಯುತ್ತಿದ್ದರು. ಮಳೆಯನ್ನೇ ಅವಲಂಬಿಸಿದ ವ್ಯವಸಾಯ ಪದ್ದತಿಗೆ 'ಕಾಡಾರಂಬ' ಹೊಲಗಾಡು ಅಥವಾ ಮಳೆಗಾಡು ಎಂದು ಕರೆಯುತ್ತಿದ್ದರು.[28] ಶಾಸನಗಳಲ್ಲಿ ಇವುಗಳನ್ನೇ ಬೆದ್ದಲು, ಹೊಲ, ಭೂಮಿ, ಕಾಡಾರಂಬವೆಂದು ಕರೆಯುತ್ತಿದ್ದರು.

ಚಿತ್ರದುರ್ಗದ ನಾಯಕರ ಅನೇಕ ಶಾಸನಗಳಲ್ಲಿ ಈ ಕಾಡರಂಬ ಉಲ್ಲೇಖವಿದೆ. ಉದಾಹರಣೆ ಚಿನ್ನನಗಿರಿದುರ್ಗದ ವೆಂಕಟರಮಣ ಸ್ವಾಮಿಗೆ ಅಮೃತ ಪಡಿ, ನಂದಾದೀಪ, ಮಂತ್ರ, ಪುಷ್ಪ ಮುಂತಾದ ಸೇವೆಗಾಗಿ ಪಿಳ್ಳೆಕೆರೇನಹಳ್ಳಿ ಗ್ರಾಮವನ್ನು ದಾನ ನೀಡಿದ ಶಾಸನದ ಪಾಠ ಈ ಕೆಳಗಿನಂತಿದೆ:

***ವಾಲ್ಮೀಕಿಗೋತ್ರದ ಕಾಮಗೇತಿ***
***ಕಸ್ತೂರಿ ಮದಕರಿ ನಯಕರು ಬ***
***ಂಮಂಣನಾಯಕರು/ ಪಿಳ್ಳೇಕೆ***
***ರೇನಹಳಿ ಗ್ರಾಮವಂನೂಹಿ***
***ರಂಣ್ಯೋದಕದಾನಧಾರಾ***
***ಪೂರ್ವಕವಾಗಿ/ತ್ರಿಕರ್ಣ***
***ದವಾಚಸಮರ್ಪಣ ಮಾಡಿ***
***ಯದೋನೆ/ಯಿಗ್ರಾಮಕೆಕಾಡಾ***
***ರಂಭನೀರಾರಂಭನಿಧಿನಿಕ್ಷೇ***
***ಯಿಗ್ರಾಮದ***

***ಅಷ್ಟ ಬೋಗತೇಜಸ್ವಾಮ್ಯಸರ್ವ***[29]

ಕೃಷಿಕನು ಸರಕಾರಕ್ಕೆ ಕೊಡಬೇಕಾಗಿದ್ದ ತೆರಿಗೆಯನ್ನು ಮುಖ್ಯವಾಗಿ ಮಣ್ಣಿನ ವರ್ಗ ಮತ್ತು ಬೇಸಾಯ ಪದ್ಧತಿಗಳನ್ನು ಆಧಾರವಾಗಿಟ್ಟುಕೊಂಡು ಸಾಗುವಳಿ ಭೂಮಿಯನ್ನು ನಾಲ್ಕು ಭಾಗಗಳಾಗಿ ವಿಂಗಡಿಸಲಾಗಿದೆ:

ಅ. ಕಾಡಾರಂಬ (ಒಣಬೇಸಾಯ)

ಆ. ನೀರಾರಂಬ (ಗದ್ದೆ ಬೇಸಾಯ)

ಇ. ತೋಟಾರಂಬ (ತೋಟದ ಬೇಸಾಯ)

ಈ. ಕುಮರಿ (ಸ್ಥಳವನ್ನು ವರ್ಗಾಯಿಸುವ ಬೇಸಾಯ)

ಶಾಸನಗಳಲ್ಲಿ ಇವುಗಳನ್ನು ಪ್ರತ್ಯೇಕವಾಗಿ ಉಲ್ಲೇಖಿಸಿರುವುದರಿಂದ ಈ ಭೂಮಿಗಳಿಗೆ ಆದ್ಯತೆಯ ಮೇರೆಗೆ ಕಂದಾಯ ನಿಗದಿ ಮಾಡಲಾಗುತ್ತಿದ್ದಿತೆಂದು ಕಂಡುಬರುತ್ತದೆ.

ನೀರಾರಂಬ ನೀರಾವರಿ ಪ್ರದೇಶವಾಗಿದ್ದು, ಇದು ಬಾವಿ, ಕಾಲುವೆ, ನೀರನ್ನು ಬಳಸಿ ವರ್ಷಕ್ಕೆ ಎರಡು ಬೆಳೆಗಳನ್ನು ಬೆಳೆಯುವ ಭೂಮಿಯಾಗಿದ್ದು ಇದು ಫಲವತ್ತತೆಯಿಂದ ಕೂಡಿರುತ್ತದೆ.

ಕಾಡಾರಂಭ ಮತ್ತು ನೀರಾರಂಭ ಉಲ್ಲೇಖವಿರುವ ಶಾಸನವು ಶೃಂಗೇರಿ ಶ್ರೀ ಶಂಕರಭಾರತೀ ಸ್ವಾಮಿಗಳವರ ಮಠಕ್ಕೆ ವಾಲ್ಮೀಕಿ ಗೋತ್ರದ ಮೆದಕೇರಿ ನಾಯಕರ ಪುತ್ರನಾದ ಭರಮಣ್ಣನಾಯಕರು ತಮ್ಮ ಹಿರಿಯರುಗಳಿಗೆ ಪುಣ್ಯ ಪ್ರಾಪ್ತವಾಗಬೇಕೆಂದು ದುರ್ಗದ ಶೀಮೆಯ ಜಾಜೂರು ಹೋಬಳಿಯ ಹನುಮನಹಳ್ಳಿ ಎಂಬ ಗ್ರಾಮವನ್ನು ದಾನವಾಗಿ ಕೊಟ್ಟ ವಿವರಗಳು ದಾಖಲಾಗಿವೆ.

ಶಾಸನಗಳಲ್ಲಿ ಒಂದು ಖಂಡುಗ ಭೂಮಿ ಎಂದು ಉಲ್ಲೇಖವಿದೆ. ಒಂದು ಖಂಡುಗ ಭೂಮಿ ಎಂದರೆ ಆ ಪ್ರಮಾಣದ ಬೀಜವನ್ನು ಬಿತ್ತುವ ಭೂಮಿ ಅಥವಾ ಅಷ್ಟು ಪ್ರಮಾಣದ ಧಾನ್ಯವನ್ನು ಬೆಳೆಯುವ ಭೂಮಿಯಾಗಿರಬಹುದಾಗಿದೆ. ಕ್ರಿ.ಶ.1410ರಲ್ಲಿ ಹರಿದ್ರಾನದಿಗೆ ಕಟ್ಟೆಯನ್ನು ಕಟ್ಟಿದ ಬುಳ್ಳಪ್ಪನಿಗೆ ಅಗ್ರಹಾರದ ಜನರು ಜಲಾಶಯದ ವಾರ್ಷಿಕ ನಿರ್ವಹಣೆಯ ಜವಾಬ್ದಾರಿ ವಹಿಸಿ ತಮ್ಮ ಪಾಲಿನ ಒಂದು ಖಂಡುಗ ಭೂಮಿಯನ್ನು ನೀಡಿದರು.[30] ಈ ಮೇಲೆ ತಿಳಿಸಿದ ಅಳತೆ ಮಾಪನದಲ್ಲಿಯೂ ಕೃಷಿ ಭೂಮಿಯನ್ನು ವಿವಿಧ ಹೆಸರುಗಳಿಂದ ಕರೆಯಲಾಗುತ್ತಿತ್ತು.

ತೋಟದ ಉಲ್ಲೇಖವಿರುವ ಶಾಸನವು ನೀರ್ಥಡಿಯ ನರಸಿಂಹಸ್ವಾಮಿಯ ದೇವಾಲಯವನ್ನು ದಿಲ್ಲಿಯ ಅರಸರು ಭಗ್ನಗೊಳಿಸಿದಾಗ ಚಿತ್ರದುರ್ಗದ ಅರಸ ಭರಮಣ್ಣನಾಯಕರು ಕ್ರಿ.ಶ.1698ರಲ್ಲಿ ದೇವಸ್ಥಾನವನ್ನು ಜೀರ್ಣೋದ್ಧಾರ ಮಾಡಿಸಿ ಭರಮಸಾಗರ ಸೀಮೆಯ ಎಮ್ಮೆಹಟ್ಟಿಗೆ ಎರಡು ಮವಂಸ್ತ ತೋಟವನ್ನು ದೇವರಿಗೆ ದತ್ತಿ ನೀಡಿದನು.[31] ಬಸವಾಪಟ್ಟಣ ನಾಡಿಗರು ಸೆಟ್ಟರುಗಳ ಕೋರಿಕೆಯಂತೆ ಅಲ್ಲಿನ ಅಧಿಕಾರಿ ಮೊಲ್ಲಿಪುರವೆಂಬ ಗ್ರಾಮವನ್ನು ನಿರ್ಮಿಸಿ ಅಲ್ಲಿ ಸರೋವರವೆನಿಸುವಂತ ಕೆರೆಯನ್ನು ನಿರ್ಮಿಸಿದರು. ಅಲ್ಲಿ ತೆಂಗು, ರಸಬಾಳೆ ಮೊದಲಾದವುಗಳು ಬೆಳೆದು ಸಂತಸದಿಂದ ಇರುವಂತಾಯಿತು.

ಒಟ್ಟಾರೆಯಾಗಿ ನಾಯಕರ ಕಾಲದಲ್ಲಿ ಕೃಷಿ ಭೂಮಿಯನ್ನು ಭೂಮಿಯ ಫಲವತ್ತತೆಯ ಅನುಗುಣವಾಗಿ ವರ್ಗೀಕರಿಸಿ ತೆರಿಗೆಯನ್ನು ವಿಧಿಸಲಾಗುತ್ತಿತ್ತು. ಕಾಡರಂಭ, ನಿರಾರಂಭ, ತೋಟ ಈ ರೀತಿಯ ಪದಗಳ ಉಲ್ಲೇಖ ಶಾಸನಗಳಿಂದ ಬರುವುದರಿಂದ ನಾಯಕರ ಆಳ್ವಿಕೆ ಕಾಲದಲ್ಲಿ ಕರೆ, ಯರೆ, ಮರಳು, ಕಲ್ಲು, ಗಡ್ಡೆ, ಮಟ್ಟಿ ಎಂಬ ಭೂಮಿಯ ವರ್ಗೀಕರಣವನ್ನು ಗುರುತಿಸಬಹುದಾಗಿದೆ.

**ಕೊನೆ ಟಿಪ್ಪಣಿಗಳು**

1. ಅಪ್ಪಾದೊರೈ ಎ., ಇಕನಾಮಿಕ್ ಕಂಡೀಷನ್ಸ್ ಇನ್ ಸದರ್ನ್ ಇಂಡಿಯಾ ಕ್ರಿ.ಶ.1000, 1500, ಸಂಪುಟ–1, ಮದರಾಸು, 1936, ಪು.ಸಂ.25

2. ನೀಲಕಂಠಶಾಸ್ತ್ರಿ ಕೆ.ಎ., ಎ ಹಿಸ್ಟರಿ ಆಫ್ ಸೌತ್ ಇಂಡಿಯಾ, ಮದರಾಸು, 1966, ಪು.ಸಂ.317
3. ವಿನ್‌ಸೆಂಟ್ ಸ್ಮಿತ್, ಅರ್ಲಿ ಹಿಸ್ಟರಿ ಆಫ್ ಇಂಡಿಯಾ, 1925, ಪು.ಸಂ.137–138
4. ಘೋಷಾಲ್ ಯು.ಎನ್., ದಿ ಅಗ್ರೇರಿಯನ್ ಸಿಸ್ಟಮ್ ಇನ್ ಏನ್ಸಿಯಂಟ್ ಇಂಡಿಯಾ, ಕಲ್ಕತ್ತಾ, 1930, ಪು.ಸಂ.89
5. ವಿಜ್ಞಾನೇಶ್ವರ, ದಿ ಮಿತಾಕ್ಷರ (ಅನು), ಪು.ಸಂ.983, 979, 994, 979, 80
6. ಬರ್ಟನ್ ಸ್ಟೈನ್, ದಿ ಸೆಗ್ಮೆಂಟರಿ ಸ್ಟೇಟ್ ಇನ್ ಟೈಮ್ ರಿಫ್ಲೇಕ್ಷನ್ಸ್, ದಿ ಸ್ಟೇಟ್ ಇನ್ ಇಂಡಿಯಾ (ಸಂ), ಹರ್ಮನ್ ಕುಲ್ಕೆ, ದೆಹಲಿ, 1995, ಪು.ಸಂ. 134–161
7. ಅಪ್ಪಾದೊರೈ ಎ., ಪೂರ್ವೋಕ್ತ, ಪು.ಸಂ.123–124
8. ಅದೇ, ಪು.ಸಂ.123–124
9. ಬಿ.ಕೆ.ಐ, 1–2, 136, ಕ್ರಿ.ಶ.1091
10. ಗುರುರಾಜಾಚಾರ್ ಎಸ್., ಸಮ್ ಆಸ್ಪೆಕ್ಟ್ಸ್ ಆಫ್ ಎಕನಾಮಿಕ್ ಆ್ಯಂಡ್ ಸೋಶ್ಯಲ್ ಲೈಫ್ ಇನ್ ಕರ್ನಾಟಕ, ಮೈಸೂರು, 1974, ಪು.ಸಂ.189
11. ಅದೇ, ಪು.ಸಂ.29–31
12. ಮೋಹನ್‌ಕೃಷ್ಣ ರೈ ಕೆ., ಪ್ರಭುತ್ವ ಮತ್ತು ಜನತೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2004, ಪು.ಸಂ.44–47
13. ಲಕ್ಷ್ಮಣ್ ತೆಲಗಾವಿ (ಸಂ)., ಹರತಿಸಿರಿ, ವಾಲ್ಮೀಕಿ ಸಾಹಿತ್ಯ ಸಂಪದ, ಹರ್ತಿಕೋಟೆ, 1987, ಪು.ಸಂ. 380–183
14. ಪುಟ್ಟಣ್ಣ ಎಂ.ಎಸ್., ಚಿತ್ರದುರ್ಗದ ಪಾಳೆಯಗಾರರು, ಮದಕರಿ ಪ್ರಕಾಶನ, ಚಿತ್ರದುರ್ಗ, 1924, ಪು.ಸಂ.8
15. ಎಂ.ಎ.ಆರ್., 1946, ಪು.ಸಂ.3–36
16. ಗಿರಿಜ ಟಿ., ಚಿತ್ರದುರ್ಗ ಜಿಲ್ಲಾ ದರ್ಶನಿ, ರೇಖಾ ಪ್ರಕಾಶನ, ದಾವಣಗೆರೆ, 1991, ಪು.ಸಂ.83
17. ಪುಟ್ಟಣ್ಣ ಎಂ.ಎಸ್., ಪೂರ್ವೋಕ್ತ, ಪು.ಸಂ.1–17
18. ಬಸಯ್ಯಾ ಮಠಪತಿ, ಕಲ್ಯಾಣ ಚಾಲುಕ್ಯರ ಕಾಲದ ವ್ಯಾಪಾರ ಮತ್ತು ವಾಣಿಜ್ಯ ವ್ಯವಸ್ಥೆ ಪಿಎಚ್.ಡಿ ಮಹಾಪ್ರಬಂಧ, ಕರ್ನಾಟಕ, ವಿಶ್ವವಿದ್ಯಾಲಯ, ಧಾರವಾಡ, 2017, ಪು.ಸಂ.17
19. ಶ್ಯಾಮಲ ಸಿ.ಆರ್., ಪೂರ್ವೋಕ್ತ, ಪು.ಸಂ.439
20. ಎ.ಕ. XI, ಚಳ್ಳಕೆರೆ, 35
21. ಇಂದು ಬಾಯಿ ಟಿ.ಕೆ.(ಸಂ)., ಉದ್ದಾಳಿಕನ ಕಥೆ, ಪದ್ಯ 176, ಪು.ಸಂ.49
22. ಅದೇ, ಪದ್ಯ 182, ಪು.ಸಂ.50
23. ಸಂತೋಷ ಎನ್.ಜಿ., ಪೂರ್ವೋಕ್ತ, ಪು.ಸಂ.63
24. ಎ.ಕ.V, ಬೇಲೂರು, 175
25. ಮೋಹನ್‌ಕೃಷ್ಣ ರೈ ಕೆ., ಪ್ರಭುತ್ವ ಮತ್ತು ಜನತೆ, ಪೂರ್ವೋಕ್ತ, ಪು.ಸಂ.18–19
26. ಅರುಣ್ ಹೆಚ್.ಟಿ., ಕೆಳದಿ ನಾಯಕರ ಕಾಲದ ತೆರಿಗೆ ಪದ್ಧತಿ, (1500–1763), ಪಿಎಚ್.ಡಿ ಮಹಾಪ್ರಬಂಧ ಅಪ್ರಕಟಿತ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ, 2000, ಪು.ಸಂ.41
27. ದೇಶಪಾಂಡೆ ಎಚ್.ಟಿ., ದಿ ಚಿತ್ರದುರ್ಗ ಸ್ಟೇಟ್, ಅಪ್ರಕಟಿತ ಪಿಎಚ್.ಡಿ ಮಹಾಪ್ರಬಂಧ, ಪುಣೆ ಯೂನಿವರ್ಸಿಟಿ, ಪುಣೆ, 1979, ಪು.ಸಂ.105
28. ಗೋಪಾಲ್ ಬಿ.ಆರ್.(ಸಂ), ಚಿತ್ರದುರ್ಗ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಹೊಸಪೇಟೆ, 2005, ಪು.ಸಂ.254

29.ಚಿನ್ನಸ್ವಾಮಿ ಸೋಸಲೆ ಎನ್., ಸಾಮ್ರಾಜ್ಯ ಮತ್ತು ಸಂಸ್ಥಾನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2004, ಪು.ಸಂ.112

30.ಗಂಗಾನಾಯಕ್ ಕೆ.ಎನ್.(ಪ್ರ.ಸಂ), ಪಾಳೆಯಗಾರರ ಶಾಸನಗಳು, ಸಂಪುಟ-1, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಮತ್ತು ಮೈಸೂರು ವಿಶ್ವವಿದ್ಯಾಲಯ, ಮೈಸೂರು, 2012, ಪು.ಸಂ.50

31. ಅದೇ, ಪು.ಸಂ.51

32.ಎ.ಕ. XI, ದಾವಣಗೆರೆ, 23